# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ

**ಸಿಸಿ ನಂ 155/2024**

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 12-03-2025 ರಂದು ಪ್ರಮಾಣ ಮಾಡಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ಃ ಮಹದೇವಪ್ಪ ಬಾಬಜಿ | ಪ್ರಾ.ಸಾ ಃ 01 |
| ತಂದೆ ಃ ಗಂಡ ಹೆಸರು | ಃ ಮಲ್ಲಪ್ಪ | ಚಾ.ಸಾ ಃ 02 |
| ವಯಸ್ಸು | ಃ 50 ವರ್ಷ | |
| ಉದ್ಯೋಗ | ಃ ಕೂಲಿ | |
| ವಾಸಸ್ಥಳ | ಃ ಗಂಬ್ಯಾಪುರ | |

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದಃ**

ನನಗೆ ಚಾಸಾ-3 ರವರ ಪರಿಚಯ ಇದೆ. ನನಗೆ ಆರೋಪಿಯ ಪರಿಚಯ ಇದೆ.

ಸುಮಾರು 2-3 ವರ್ಷಗಳ ಹಿಂದೆ ಕಲಘಟಗಿ ಪೋಲೀಸ ಠಾಣೆಗೆ ನಮ್ಮ ಮನೆಗೆ ಸೇರಿದ ವಿವಾದಕ್ಕೆ ಸಂಬಂಧಿಸಿದಂತೆ ಹೋದಾಗ ಪೋಲೀಸರು ಈಗ ತೋರಿಸಲಾದ ಪಂಚನಾಮೆಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಪಂಚನಾಮೆಯನ್ನು ನಿಪಿ-1, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ಅದನ್ನು ನನಗೆ ಓದಿ ಹೇಳಿ. ಚಾಸಾ-1 ಹಾಗೂ ಅವರ ಸಿಬ್ಬಂದಿ ಜೊತೆಗೆ ನಾನು ಯಾವುದೆ ದಾಳಿಗೆ ಹೋಗಿರುವುದಿಲ್ಲ. ದಾಳಿ ಸಂದರ್ಭದಲ್ಲಿ ಈಗ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲನ್ನು ನನ್ನ ಸಮಕ್ಷಮ ಪಂಚನಾಮೆ ಜರುಗಿಸಿ ಜಪ್ತಿ ಪಡಿಸಿಕೊಂಡಿಲ್ಲ.

*(ಮಾನ್ಯ **ಸ.ಸ.ಅ** ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲಿಗೆ ಅನುಮತಿಸಿದೆ)*

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

ದಿನಾಂಕ 05.09.2022 ರಂದು ರಾತ್ರಿ 8-40 ಗಂಟೆಗೆ ನಾನು ಹಾಗೂ ಚಾಸಾ-3 ರವರು ಊರಿನ ಹತ್ತಿರ ನಡೆದುಕೊಂಡು ಹೋಗುವಾಗ ಚಾಸಾ-1 ಹಾಗೂ ಅವರ ಸಿಬ್ಬಂದಿಯವರು ಅಲ್ಲಿ ಬಂದಿದ್ದು, ತಮಗೆ ಬಂದ ಮಾಹಿತಿ ವಿಷಯವನ್ನು ನಮಗೆ ತಿಳಿಸಿದರು ಎಂದರೆ ಸರಿಯಲ್ಲ. ಚಾಸಾ-1 ಹಾಗೂ ಅವರ ಸಿಬ್ಬಂದಿಯೊಂದಿಗೆ ನಾನು ಮತ್ತು ಚಾಸಾ-3 ರವರು ಇಲಾಖಾ ವಾಹನದಲ್ಲಿ ಜೋಡಳ್ಳಿ ಕ್ರಾಸ್‌ನಿಂದ ಗಂಬ್ಯಾಪುರ ಗ್ರಾಮದ ಕಡೆಗೆ ಹೋಗುವ ರಸ್ತೆಯಲ್ಲಿ ಬಸ್ಸ ನಿಲ್ದಾಣದಲ್ಲಿ ನಿಂತಿದ್ದಾಗ ರಾತ್ರಿ 8-50 ರ ಸುಮಾರಿಗೆ ಮರೆಯಲ್ಲಿ ನಿಂತು ನೋಡುವಾಗ ಒಂದು ಮೋಟರ ಸೈಕಲ ಬಂದಿದ್ದು ಮೋಟರ ಸೈಕಲ ಸವಾರ ಟ್ಯಾಂಕ ಮೇಲೆ ಒಂದು ಚಿಲವನ್ನು ಇಟ್ಟುಕೊಂಡಿದ್ದ ಸದರಿ ವಾಹನವನ್ನು ತಡೆದು ನಿಲ್ಲಿಸಿ ವಿಚಾರಿಸಲಾಗಿ ಓಡಿ ಹೋಗಲು ಪ್ರಯತ್ನಿಸಿದ್ದು ಆತನನ್ನು ಹಿಡಿದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವ್ಯಕ್ತಿಯನ್ನು ವಿಚಾರಿಸಲಾಗಿ ತನ್ನ ಹೆಸರು ಮಲ್ಲಿಕಾರ್ಜುನ ಚಿಕ್ಕಮಠ ಎಂದು ತಿಳಿಸಿದ ಎಂದರೆ ಸರಿಯಲ್ಲ. ಚೀಲವನ್ನು ಮೋಟರ ಸೈಕಲ ಮೇಲೆ ಇದ್ದ ಚೀಲ ಪರಿಶೀಲಿಸಲಾಗಿ ಅದರಲ್ಲಿ ಓರಿಜನಲ್ ಚಾಯ್ಸ ಡಿಲಕ್ಸ ವಿಸ್ಕಿ ತುಂಬಿದ 90 ಮೀಲಿಯ 48 ಟೆಟ್ರಾ ಪ್ಯಾಕೇಟಗಳು, ಮ್ಯಾಕೀನ ತೋಷ

ಪ್ಯೂವರ ಗ್ರೀನ ತುಂಬಿದ್ದ 90 ಮೀಲಿಯ 24 ಟೆಟ್ರಾ ಪ್ಯಾಕೇಟಗಳು ಕಂಡುಬಂದಿರುತ್ತವೆ ಎಂದರೆ ಸರಿಯಲ್ಲ. ಸದರಿ ವಾಹನವನ್ನು ಪರಿಶೀಲಿಸಲಾಗಿ ಅದರ ನಂ ಕೆಎ 32/ಇ ಪಿ 2036 ಬಜಾಜ ಕಂಪನಿಗೆ ಸೇರಿದ ವಾಹನ ಆಗಿತ್ತು ಎಂದರೆ ಸರಿಯಲ್ಲ. ಈ ಬಗ್ಗೆ ವಿಚಾರಿಸಿದಾಗ ಆರೋಪಿ ಅವುಗಳನ್ನು ಹೊಂದಲು ಪರವಾನಿಗೆ ಇರುವುದಿಲ್ಲ ಎಂದು ತಿಳಿಸಿರುತ್ತಾನೆ. ಈ ಬಗ್ಗೆ ಚಾಸಾ-1 ರವರು ಸ್ಥಳದಲ್ಲಿ ನಮ್ಮ ಸಮಕ್ಷಮ ಪಂಚನಾಮೆ ಜರುಗಿಸಿ ಮಾಲನ್ನು ಜಪ್ತಿ ಪಡಿಸಿಕೊಂಡು ಅವುಗಳಿಗೆ ಸೀಲ್ ಹಾಕಿ ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1 ನ್ನು ರಾತ್ರಿ 9-10 ರಿಂದ 10-10 ರವರೆಗೆ ಜೀಪಿನ ಹೆಡ್ ಲೈಟ ಬೆಳಕಿನಲ್ಲಿ ಬರೆದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1 ನ್ನು ನನಗೆ ಓದಿ ಹೇಳಿದ ನಂತರ ಸ್ಥಳದಲ್ಲಿ ಅದಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾಳಿ ಸಂದರ್ಭದಲ್ಲಿ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸ್ಥಳದಲ್ಲಿ ನೋಡಿ ಗುರುತಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಮ್ಮ ಊರಿನವನಾಗಿದ್ದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತ ಪರ ಶ್ರೀ ಎಂ ಎಸ್ ಡಿ ವಕೀಲರಿಂದಃ**

**ಏನು ಇಲ್ಲ**

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.